# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 187 (1395) |
| 2 | ಸದಸ್ಯರ ಹೆಸರು | : | ಶ್ರೀ.ಎಸ್.ವಿ.ಸಂಕನೂರ (ಪದವೀದರರ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 16-03-2021 |
| 4 | ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಗದಗ-ಬೆಟಗೇರಿ ನಗರಕ್ಕೆ ನಿರಂತರ ಕುಡಿಯುವ ನೀರು ಸರಬರಾಜು ಯೋಜನೆ ಯಾವಾಗ ಪ್ರಾರಂಭವಾಯಿತು; ಮತ್ತು ಈ ಯೋಜನೆ ಪೂರ್ಣಗೊಳಿಸಲು ನಿಗದಿ ಪಡಿಸಿದ ಅವಧಿ ಎಷ್ಟು; ನಿಗಧಿ ಪಡಿಸಿದ ಅವಧಿಯನ್ನು ಎಷ್ಟು ಬಾರಿ ವಿಸ್ತರಿಸಲಾಗಿದೆ? | ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದ (ಎನ್‌ಕೆಯುಎಸ್‌ಐಪಿ) ಯೋಜನೆಯಡಿ ಗದಗ-ಬೆಟಗೇರಿ ನಗರಕ್ಕೆ 24/7 ನಿರಂತರ ನೀರು ಸರಬರಾಜು ಯೋಜನೆಯನ್ನು ರೂ.72.71 ಕೋಟಿಗೆ ಮೆ//.ಎಸ್‌ಪಿಎಂಎಲ್ ರವರಿಗೆ ದಿನಾಂಕ:24/12/2014 ರಲ್ಲಿ ಗುತ್ತಿಗೆ ವಹಿಸಲಾಗಿರುತ್ತದೆ.<br><br>ಕರಾರಿನ ಪ್ರಕಾರ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆ ಅವಧಿ 30 ತಿಂಗಳು ನಿಗದಿಪಡಿಸಲಾಗಿದೆ. ವ್ಯವಸ್ಥೆ ಪ್ರಯೋಗಿಕವಾಗಿ ಚಾಲನೆ ನಡೆಸಲು 3 ತಿಂಗಳ ಕಾಲಾವಧಿ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ (Operation & Maintenance) ಗಾಗಿ ಸಿವಿಲ್ ಕಾಮಗಾರಿ ಮುಕ್ತಾಯದ ನಂತರ 60 ತಿಂಗಳು ನಿಗದಿಪಡಿಸಲಾಗಿದೆ.<br><br>ಹೆಚ್ಚುವರಿ ಕಾಮಗಾರಿಯ ಪರಿಮಾಣಗಳ ಕಾರಣಗಳಿಂದ ಹಾಗೂ ಗುತ್ತಿಗೆದಾರರ ವಿಳಂಬದಿಂದ ಗುತ್ತಿಗೆ ಅವಧಿಯನ್ನು 7 ಬಾರಿ ವಿಸ್ತರಿಸಿ 28/02/2021ರ ವರೆಗೆ ಎಲ್ಲಾ ಕಾಮಗಾರಿ ಸಂಪೂರ್ಣಗೊಳಿಸಲು ಕಾಲ ವಿಸ್ತರಣೆ ಮಾಡಲಾಗಿದ್ದು, ಕೆಲವು ಕಾಮಗಾರಿಗಳು ಬಾಕಿ ಇರುವ ಕಾರಣ ಸದರಿ ಕಾಮಗಾರಿ ಸಂಪೂರ್ಣಗೊಳಿಸಲು ಮತ್ತೆ 31/05/2021 ರ ವರೆಗೆ ಕಾಲವಿಸ್ತರಣೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |
| ಆ) | 24x7 ಕುಡಿಯುವ ನೀರು ಸರಬರಾಜು ಯೋಜನೆಯನ್ನು ದಿನಾಂಕ: 04.06.2017 ರಲ್ಲಿ ಲೋಕಾರ್ಪಣೆ ಮಾಡಿರುವುದು ನಿಜವೇ? | ತುಂಗಭದ್ರಾನದಿ ಹಮ್ಮಿಗಿ ಬ್ಯಾರೇಜಿನ ಹತ್ತಿರದ ಮೂಲಸ್ಥಾವರದಿಂದ ಕಚ್ಚಾ ಸಗಟು ನೀರು ನಿರ್ಮಿಸಿ ಎರಡು ಹಂತದಲ್ಲಿ ಸುಮಾರು 55 ಕಿಮಿ ದೂರದಿಂದ ಶಿಂಗಟರಾಯಣ ಕೆರೆ ಹತ್ತಿರ ನಿರ್ಮಿಸಿರುವ ಶುದ್ಧೀಕರಣ ಘಟಕಕ್ಕೆ ಪಂಪ್ ಮಾಡಿ ಶುದ್ಧೀಕರಿಸಿದ ನೀರನ್ನು ಗದಗ-ಬೆಟಗೇರಿ ಅವಳಿ ನಗರಕ್ಕೆ ಜಲಸಂಗ್ರಹಗಾರಗಳ ಮುಖಾಂತರ ನಗರದ ಒಟ್ಟು 14 ವಲಯಗಳ ಪೈಕಿ 07 ವಲಯಗಳ ಹೊಸ ಕೊಳವೆ ಮಾರ್ಗ ಹಾಗೂ ಪೂರ್ಣಗೊಳಿಸಿರುವ ಮನೆ ಸಂಪರ್ಕಗಳಿಗೆ ಪ್ರಾಯೋಗಿಕವಾಗಿ ನೀರು ಸರಬರಾಜನ್ನು ಅಂದಿನ |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td></td><td></td><td>ಮಾನ್ಯ ಮುಖ್ಯ ಮಂತ್ರಿಗಳಿಂದ ದಿನಾಂಕ:04.06.2017ರಲ್ಲಿ ಚಾಲನೆಗೊಳಿಸಲಾಯಿತು. ಸದ್ಯಕ್ಕೆ ಈ ವ್ಯವಸ್ಥೆಯಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ.</td></tr>
<tr><td>ಇ)</td><td>ಗದಗ-ಬೆಟಗೇರಿ ನಗರದಲ್ಲಿ 24x7 ಯೋಜನೆ ಅಡಿ ಎಷ್ಟು ಮನೆಗಳಿಗೆ ನೀರಿನ ಪೈಪ್ ಲೈನ್ ಕನೆಕ್ಷನ್ ಕೊಡಲಾಗಿದೆ; ಇನ್ನು ಎಷ್ಟು ಕೊಡಬೇಕಾಗಿದೆ ?</td><td>ಗದಗ-ಬೆಟಗೇರಿ ನಗರದಲ್ಲಿ 24x7 ಯೋಜನೆ ಕಾಮಗಾರಿ ಅಡಿ 41618 ಮನೆಗಳ ನಳ ಸಂಪರ್ಕವನ್ನು ಕರಾರಿನಂತೆ ನೀಡಬೇಕಾಗಿರುತ್ತದೆ. ಈ ಪೈಕಿ 36606 ಮನೆಗಳ ನಳ ಸಂಪರ್ಕವನ್ನು ನೀಡಲಾಗಿದೆ. ಬಾಕಿ 5012 ಸಂಖ್ಯೆ ಮನೆ ನಳ ಸಂಪರ್ಕ ಪ್ರಗತಿಯಲ್ಲಿದೆ.</td></tr>
<tr><td>ಈ)</td><td>24x7 ಕುಡಿಯುವ ನೀರು ಸರಬರಾಜು ಯೋಜನೆ ಪೂರ್ಣಗೊಳಿಸಲು ಇನ್ನು ಅಗಬೇಕಾದ ಕೆಲಸ ಕಾರ್ಯಗಳೇನು; (ವಿವರ ನೀಡುವುದು)</td><td>24x7 ಕುಡಿಯುವ ನೀರು ಸರಬರಾಜು ಯೋಜನೆ ಪೂರ್ಣಗೊಳಿಸಲು ಇನ್ನು ಆಗಬೇಕಾದ ಕೆಲಸ ಕಾರ್ಯಗಳ ವಿವರ ಕೆಳಗಿನಂತಿದೆ:
<table>
<tr><th>ಅಂಶಗಳು</th><th>ಕರಾರಿನಂತೆ ಪರಿಮಾಣ</th><th>ವೇರಿಯೇಷನ್ ಪರಿಮಣ</th><th>ಸಾಧನೆ ವೇರಿಯೇಷನ್ ಸೇರಿ</th><th>ಬಾಕಿ</th></tr>
<tr><td>HDPE ವಿತರಣ ಜಾಲದ ಪೈಪ್‌ಲೈನ</td><td>300.00 ಕಿ.ಮಿ</td><td>143.27 ಕಿ.ಮಿ</td><td>424.39 ಕಿ.ಮಿ</td><td>18.89 ಕಿ.ಮಿ</td></tr>
<tr><td>DI / HDPE ಫೀಡರ್ ಪೈಪ್‌ಲೈನ</td><td>6.01 ಕಿ.ಮಿ</td><td>6.00</td><td>10.25 ಕಿ.ಮಿ</td><td>1.76 ಕಿ.ಮಿ</td></tr>
<tr><td>ಗೃಹ ನಳ ಸಂಪರ್ಕ</td><td>41618 ಸಂಖ್ಯೆ</td><td>--</td><td>36606 ಸಂಖ್ಯೆ</td><td>5012 ಸಂಖ್ಯೆ</td></tr>
<tr><td>ಮೇಲ್ಮಟ್ಟದ ಜಲ ಸಂಗ್ರಹಗಾರ</td><td>05 ಸಂಖ್ಯೆ</td><td>--</td><td>04 ಸಂಖ್ಯೆ</td><td>01 ಸಂಖ್ಯೆ</td></tr>
<tr><td>ವಾಲ್ವ ಜೋಡಣೆ</td><td>1188 ಸಂಖ್ಯೆ</td><td>--</td><td>283 ಸಂಖ್ಯೆ</td><td>905 ಸಂಖ್ಯೆ</td></tr>
</table>
* ಸುಮಾರು 17.5 ಕಿ.ಮೀ ನಕ್ಷೆಯಲ್ಲಿ ಅನುಮೋದನೆ ಇಲ್ಲದಿರುವ ಕಡೆ ಅಳವಡಿಸಲಾಗಿದ್ದು, ಅದನ್ನು ಸಕ್ರಮಗೊಳಸಿಬೇಕಾಗಿದೆ.</td></tr>
<tr><td>ಉ)</td><td>ಈ ಯೋಜನೆ ಪೂರ್ಣಗೊಳಿಸಲು ಇನ್ನು ಎಷ್ಟು ಕಾಲಾವಕಾಶ ಬೇಕು?</td><td>ಗುತ್ತಿಗೆದಾರರು ಸದರಿ ಕಾಮಗಾರಿ ಸಂಪೂರ್ಣಗೊಳಿಸಲು ಮತ್ತೆ ದಿನಾಂಕ:31/05/2021 ರವರೆಗೆ ಕಾಲವಿಸ್ತರಣೆ ಕೋರಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.</td></tr>
</table>

ಕಡತ ಸಂಖ್ಯೆ: ನಅಇ 71 ಪಿ.ಆರ್.ಜೆ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು